# ಕನ್ನಡವನ್ನು ‘ಅನ್ನದ ಭಾಷೆ’ಯಾಗಿಸಿ

> ಜನಸಾಮಾನ್ಯರು ಇಂಗ್ಲಿಷ್ ಶಾಲೆಗಳ ಮೇಲೆ ಹೆಚ್ಚಿನ ಮೋಹವನ್ನು ಇಟ್ಟುಕೊಳ್ಳಲು ಇರುವ ಕಾರಣಗಳಲ್ಲಿ, ‘ಇಂಗ್ಲಿಷ್ ಉದ್ಯೋಗ ಒದಗಿಸುವ ಭಾಷೆಯಾಗಿದೆ’ ಎನ್ನುವುದು ಮುಖ್ಯವಾದದ್ದು. ಅದೇ ರೀತಿಯಲ್ಲಿ ರಾಜ್ಯದಲ್ಲಿ ಕನ್ನಡವನ್ನೂ ‘ಅನ್ನದ ಭಾಷೆ’ಯನ್ನಾಗಿ ರೂಪಿಸುವ ಕಾನೂನು ಕ್ರಮಗಳನ್ನು ಸರ್ಕಾರ ಕಟ್ಟುನಿಟ್ಟಾಗಿ ಏಕೆ ಜಾರಿಗೆ ತರಬಾರದು?

ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಲ್ಲೂ ಕನ್ನಡವನ್ನು ಕಲಿಕಾ ಮಾಧ್ಯಮವಾಗಿ ಕಡ್ಡಾಯ ಮಾಡುವ ನಿಟ್ಟಿನಲ್ಲಿ ಇರುವ ಕಾನೂನಿನ ಅಡೆತಡೆಗಳನ್ನು ನಿವಾರಿಸಲು ರಾಜ್ಯ ಸರ್ಕಾರ ಹೊಸ ಹೆಜ್ಜೆಯೊಂದನ್ನು ಪ್ರಕಟಿಸಿದೆ. ಈಗಾಗಲೆ ಜಾರಿಯಲ್ಲಿರುವ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ (ಆರ್‌ಟಿಇ) ಕಾಯ್ದೆಗೆ ತಿದ್ದುಪಡಿ ಮಾಡುವುದೇ ಆ ಹೆಜ್ಜೆ. ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯ್ದೆಯಲ್ಲಿ ಸೆಕ್ಷನ್ 29 (2) (ಎಫ್) ನಲ್ಲಿ ‘ಮಗುವಿನ ಶಿಕ್ಷಣ ಮಾಧ್ಯಮವು ಮಾತೃಭಾಷೆಯಲ್ಲಿರಬೇಕು’ ಎಂದು ಇರುವ ಕಡೆ, ‘ಕನ್ನಡದಲ್ಲಿರಬೇಕು’ ಎಂದು ನಮೂದಿಸುವುದಾಗಿ ಕಾನೂನು ಸಚಿವ ಟಿ.ಬಿ.ಜಯಚಂದ್ರ ಪತ್ರಿಕಾಗೋಷ್ಠಿಯಲ್ಲಿ ಸರ್ಕಾರದ ನಿರ್ಧಾರವನ್ನು ತಿಳಿಸಿದ್ದಾರೆ. ಈ ಸಂಬಂಧ ಶೀಘ್ರವೇ ನಡೆಯುವ ವಿಧಾನಸಭೆ ಅಧಿವೇಶನದಲ್ಲಿ ಮಸೂದೆ ಮಂಡಿಸುವುದಾಗಿಯೂ ಅವರು ಹೇಳಿದ್ದಾರೆ. ಆರ್‌ಟಿಇ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ಸುಪ್ರೀಂಕೋರ್ಟಿನಲ್ಲಿ ಸಲ್ಲಿಸಬೇಕಾದ ಪರಿಹಾರಾತ್ಮಕ ಅರ್ಜಿಯನ್ನು ಬಲಪಡಿಸಬಹುದು, ಹಾಗೆಯೇ ಭಾಷಾ ಮಾಧ್ಯಮಕ್ಕೆ ಸಂಬಂಧಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳು ಹೂಡಿರುವ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಸಮರ್ಥವಾಗಿ ಎದುರಿಸಬಹುದು ಎಂದು ರಾಜ್ಯ ಸರ್ಕಾರವು ಅಂದುಕೊಂಡಿದೆ.

ಸರ್ಕಾರದ ಈ ನಿರ್ಧಾರವು, ಖಾಸಗಿ ಶಿಕ್ಷಣ ಸಂಸ್ಥೆಗಳು ಹೂಡಿರುವ ನ್ಯಾಯಾಂಗ ನಿಂದನೆಯನ್ನು ಎದುರಿಸಲು ಹೇಗೆ ನೆರವಾಗುತ್ತದೋ ಗೊತ್ತಾಗುತ್ತಿಲ್ಲ. ಆದರೆ ಇದರಿಂದ ರಾಜ್ಯದಲ್ಲಿ ಭಾಷಾನೀತಿಗೆ ಸಂಬಂಧಿಸಿ ಇನ್ನಷ್ಟು ಗೊಂದಲಗಳು ಉಂಟಾಗುವುದು ಖಚಿತ. ಸರ್ಕಾರ ಆರ್‌ಟಿಇ ಕಾಯ್ದೆಯ ರಕ್ಷಣೆ ನೀಡಿರುವುದರಿಂದ ಈಗ ಬಡವರ ಮತ್ತು ಹಿಂದುಳಿದವರ ಮಕ್ಕಳು ತಮ್ಮ ಮನೆಯ ಸುತ್ತ ಇರುವ ‘ಪ್ರತಿಷ್ಠಿತ’ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಸೀಟು ಪಡೆಯುವುದು ಸುಲಭವಾಗಿದೆ. ಆರ್‌ಟಿಇ ಕಾಯ್ದೆಗೆ ಉದ್ದೇಶಿತ ತಿದ್ದುಪಡಿಯಾಗಿ ‘ಮಗುವಿನ ಶಿಕ್ಷಣ ಮಾಧ್ಯಮವು ಕನ್ನಡದಲ್ಲಿರಬೇಕು’ ಎಂದಾದರೆ, ಈ ಬಡವರ ಮಕ್ಕಳು ಇನ್ನುಮುಂದೆ ಆಂಗ್ಲ ಮಾಧ್ಯಮ ಶಾಲೆಗಳ ಬದಲಿಗೆ ಕನ್ನಡ ಮಾಧ್ಯಮ ಶಾಲೆಗಳಲ್ಲೇ ಪ್ರವೇಶ ಪಡೆಯುವಂತಾಗುತ್ತದೆ. ಅಂದರೆ ಆರ್‌ಟಿಇ ಕಾಯ್ದೆಯಿಂದಾಗಿ, ಶಿಕ್ಷಣದಲ್ಲಿ ತಾರತಮ್ಯ ನೀತಿ ಸ್ವಲ್ಪಮಟ್ಟಿಗೆ ನಿವಾರಣೆ ಆಗುತ್ತಿದೆ ಎಂದುಕೊಂಡದ್ದೂ ಸುಳ್ಳಾಗುತ್ತದೆ. ಕನ್ನಡ ಮಾಧ್ಯಮದ ಶಾಲೆಗಳೇ ಬಡವರ ಮಕ್ಕಳಿಗೆ ಕಾಯಂ ಎಂಬಂತಾಗುತ್ತದೆ.

‘ಪ್ರಾಥಮಿಕ ಹಂತದಲ್ಲಿ ಮಕ್ಕಳು ಯಾವ ಮಾಧ್ಯಮದಲ್ಲಿ ಕಲಿಯಬೇಕು ಎನ್ನುವುದನ್ನು ನಿರ್ಧರಿಸುವ ಹಕ್ಕು ಪೋಷಕರಿಗೆ ಇದೆ’ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ಸರಿಯಷ್ಟೆ. ಭಾಷಾ ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂವಿಧಾನವು ನೀಡಿರುವ ರಕ್ಷಣೆಯ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟಿನ ಈ ತೀರ್ಪನ್ನು ಅರ್ಥ ಮಾಡಿಕೊಳ್ಳಬೇಕು ಎನ್ನುವುದೂ ನಿಜ. ಆದರೆ ಸುಪ್ರೀಂಕೋರ್ಟ್ ಅಂದುಕೊಂಡಂತೆ ಎಷ್ಟು ಪೋಷಕರು ಇವತ್ತು ರಾಜ್ಯದಲ್ಲಿ ತಮ್ಮ ಮಾತೃಭಾಷೆಯಾದ ಕನ್ನಡ, ಉರ್ದು, ತೆಲುಗು, ತಮಿಳು, ಕೊಂಕಣಿ, ಮರಾಠಿ ಮಾಧ್ಯಮದ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿದ್ದಾರೆ? ಎಲ್ಲರೂ ಮಾತೃಭಾಷೆಯ ಗುರಾಣಿ ಇಟ್ಟುಕೊಂಡು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೇ ತಮ್ಮ ಮಕ್ಕಳನ್ನು ಸೇರಿಸುತ್ತಿರುವುದು. ಅಂತಿಮವಾಗಿ ಇದರ ಹೊಡೆತ ಬೀಳುತ್ತಿರುವುದು ಕನ್ನಡದ ಮೇಲೆಯೇ. ಈ ಸತ್ಯವನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡುವುದು ಹೇಗೆ ಎನ್ನುವುದನ್ನು ಸರ್ಕಾರ ಆಲೋಚಿಸಬೇಕಿದೆ.

ಜನಸಾಮಾನ್ಯರು ಇಂಗ್ಲಿಷ್ ಶಾಲೆಗಳ ಮೇಲೆ ಹೆಚ್ಚಿನ ಮೋಹವನ್ನು ಇಟ್ಟುಕೊಳ್ಳಲು ಇರುವ ಕಾರಣಗಳಲ್ಲಿ, ‘ಇಂಗ್ಲಿಷ್ ಅನ್ನದ ಅಥವಾ ಉದ್ಯೋಗ ಒದಗಿಸುವ ಭಾಷೆಯಾಗಿದೆ’ ಎನ್ನುವುದು ಮುಖ್ಯವಾದದ್ದು. ಅದೇ ರೀತಿಯಲ್ಲಿ ರಾಜ್ಯದಲ್ಲಿ ಕನ್ನಡವನ್ನೂ ‘ಅನ್ನದ ಭಾಷೆ’ಯನ್ನಾಗಿ ರೂಪಿಸುವ ಕಾನೂನು ಕ್ರಮಗಳನ್ನು ಸರ್ಕಾರ ಕಟ್ಟುನಿಟ್ಟಾಗಿ ಏಕೆ ಜಾರಿಗೆ ತರಬಾರದು? ರಾಜ್ಯದ ಎಷ್ಟು ಖಾಸಗಿ ಕಂಪೆನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಕ್ಕಿದೆ ಎನ್ನುವುದರ ಮಾಹಿತಿಯೇನಾದರೂ ಸರ್ಕಾರದ ಬಳಿ ಇದೆಯೆ? ಬೆಂಗಳೂರು ನಗರವೊಂದರಲ್ಲೇ ಸುಮಾರು 18 ಲಕ್ಷ ಐಟಿ ಉದ್ಯೋಗಗಳಿವೆ ಎನ್ನಲಾಗುತ್ತಿದೆ. ಅಲ್ಲಿ ಕನ್ನಡಿಗರಿಗೆ ಮೀಸಲಾತಿ ಒದಗಿಸಲು ಸರ್ಕಾರಕ್ಕೆ ಏಕೆ ಸಾಧ್ಯವಾಗುವುದಿಲ್ಲ? ಇದರಿಂದ ಕಂಪೆನಿಗಳು ಬೇರೆಡೆಗೆ ವಲಸೆ ಹೋಗಬಹುದು ಎನ್ನುವ ಭಯ ಅನಗತ್ಯ. ಭೂಮಿ, ನೀರು, ವಿದ್ಯುತ್ ಕಡಿಮೆ ದರದಲ್ಲಿ ಕೊಟ್ಟರೆ ಯಾವ ಕಂಪೆನಿಯಾದರೂ ಇಲ್ಲಿಗೆ ಬಂದೇ ಬರುತ್ತದೆ. ಕನ್ನಡ ಅನ್ನದ ಭಾಷೆಯಾದರೆ, ಪೋಷಕರೂ ಕನ್ನಡ ಮಾಧ್ಯಮದ ಶಾಲೆಗಳಿಗೆ ಮಕ್ಕಳನ್ನು ಸೇರಿಸುವುದು ಅನಿವಾರ್ಯವಾಗುತ್ತದೆ.

■ ಬಿ.ಎಂ.ಹನೀಫ್



ಶಿಲ್ಪಾ